ದಿನಮಾನಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಅಲ್ಲಿ ಬಂದರಿನಲ್ಲಿ ಅಭಿವೃದ್ಧಿ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆನ್ನುವ ಮಾಹಿತಿಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ನೀಡಬಯಸುತ್ತೇನೆ

ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿಪಡಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 28 (209) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಮಾನ್ಯ ಪ್ರವಾಸೋದ್ಯಮ ಮತ್ತು ಮೌಲಸೌಲಭ್ಯ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಎಷು ಪ್ರೇಕ್ಷಣೆಯ ಸ್ಥಳಗಳನ್ನು ಪ್ರವಾಸೋದ್ಯ ಇಲಾಖೆ ಗುರುತಿಸಿ ಅಭಿವೃದ್ಧಿ ಪಡಿಸಿದೆ, (ಅವುಗಳ ವಿವರ ಒದಗಿಸುವುದು)

ಆ) ವೇಣೂರು ಗಡಾಯಿಕಲ್ಲು, ಶಿಶಿಲ, ಪಶ್ಚಿಮಘಟ್ಟಗಳ ಪರ್ವತ ಶ್ರೇಣಿಗಳಲ್ಲಿ ಪ್ರವಾಸೋದ್ಯಮ ಇಲಾಕೆಯು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ವಿವರಗಳೇನು,

ಇ) ಕರಾವಳಿ ಜಿಲ್ಲೆಗಳಲ್ಲಿ ಅಭಿವೃದ್ಧಿ ಪಡಿಸದೇ ಇರುವ ಪ್ರವಾಸೋದ್ಯಮ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಕ್ರಮಗಳೇನು

ಶ್ರೀ ಶ್ರೀರಾಮುಲು ಪ್ರವಾಸೋದ್ಯಮ ಮತ್ತು ಮೌಲಸೌಲಭ್ಯ ಅಭಿವೃದ್ಧಿ ಸಚಿವರು

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಇಲಾಖೆಯು ಧರ್ಮಸ್ಥಳ ಹಾಗೂ ವೇಣೂರುಗಳನ್ನು ಪ್ರವಾಸಿ ಸ್ಥಳಗಳೆಂದು ಪ್ರವಾಸೋದ್ಯಮ ನೀತಿಯಡಿ ಗುರುತಿಸಲಾಗಿದೆ ವೇಣೂರು ಹಾಗೂ ಧರ್ಮಸ್ಥಳಗಳನ್ನು ಜೈನ್ ಸರ್ಕ್ಯೂಟ್‌ನ ಅಡಿ ಪ್ರಚಾಪಡಿಸಿ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಈ ಹಿಂದೆಯೇ ಕ್ರಮ ತೆಗೆದುಕೊಳ್ಳಲಾಗಿದೆ

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಇಬ್ಬರು ಖಾಸಗೀ ಬಂಡವಾಳದಾರರು ಮೇಲ್ಕಂಡ ನೀತಿಯಲ್ಲಿ ಘೋಷಿಸಲಾಗಿದ್ದ ಸವಲತ್ತುಗಳನ್ನು ಉಪಯೋಗಿಸಿ ಕೊಂಡು ಗಡಾಯಿಕಲ್ಲು ವ್ಯಾಪ್ತಿಯಲ್ಲಿ ಪ್ರವಾಸಿ ವಸತಿಗಳನ್ನು ನಿರ್ಮಿಸಿರುತ್ತಾರೆ

ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯಲ್ಲಿ ಇಲಾಖೆ/ಯು ತನಗೆ ಲಭ್ಯವಿರುವ ಅನುದಾನವನ್ನು ಉಪಯೋಗಿಸಿಕೊಂಡು ಅನೇಕ ಸ್ಥಳಗಳಲ್ಲಿ ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿರುತ್ತದೆ

ಇ) ಅನುದಾನದ ಲಭ್ಯತೆಗೆ ಅನುಗುಣವಾಗಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ಕೆಳಕಂಡ ಕಡಲು ತೀರಗಳಲ್ಲಿ ಪ್ರವಾಸಿ ಸೌಲಭ್ಯ ನಿರ್ಮಿಸಲು ಕೇಂದ್ರ ಧನಸಹಾಯಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು ಸದರಿ ಯೋಜನೆಗಳಿಗೆ ಕೇಂದ್ರವು 209 40 ಲಕ್ಷ ರೂ ಗಳನ್ನು ಮೊದಲ ಕಂತಾಗಿ ಬಿಡುಗಡೆ ಮಾಡಿದ್ದು ಇದರಲ್ಲಿ ರೂ 30 00 ಲಕ್ಷಗಳ ವೆಚ್ಚದಲ್ಲಿ ಸೈನೇಜುಗಳನ್ನು ಅಳವಡಿಸಲಾಗಿದೆ ಏತನ್ಮಧ್ಯೆ ಕೇಂದ್ರವು, ನೂತನ ಮಾರ್ಗಸೂಚಿ ಅನ್ವಯ ವಿವರವಾದ ಯೋಜನಾ ವರದಿಗಳನ್ನು ಸಲ್ಲಿಸುವಂತೆ ತಿಳಿಸಿದ್ದು ಅದೇ ಪ್ರಕಾರ ಪರಿಷ್ಕೃತ ಯೋಜನಾ ವರದಿಗಳನ್ನು ಇಲಾಖೆಯಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ

1) ಗೋಕರ್ಣ ಕಡಲ ತೀರ
2) ಮಲ್ಪೆ ಕಡಲ ತೀರ
3) ಸೆಂಟ್ ಮೇರೀ ದ್ವೀಪ
4) ತಣ್ಣೀರುಭಾವಿ ಕಡಲ ತೀರ
5) ತ್ರಾಸಿ ಕಡಲ ತೀರ
6) ಪಣಂಭೂರು ಕಡಲ ತೀರ
7) ಕಾಸರಗೋಡು ಕಡಲ ತೀರ
8) ಉಲ್ಲಾಳ ಕಡಲ ತೀರ

ಮೇಲ್ಕಂಡ ಯೋಜನಾ ವರದಿಗಳನ್ನು ಕೇಂದ್ರದಿಂದ ಅನುಮೋದನೆ ಆದ ಕೂಡಲೇ ಕಾಮಗಾರಿಗಳನ್ನು ಆರಂಭಿಸಲಾಗುವುದು

ಶ್ರೀ ಕೆ ಪ್ರಭಾಕರ ಬಂಗೇರ ಮಾನ್ಯ ಅಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಇಬ್ಬರು ಖಾಸಗಿ ಬಂಡವಾಳದಾರರಿಗೆ ಸವಲತ್ತುಗಳನ್ನು ಒದಗಿಸಿಕೊಂಡು ಗಡಾಯಿಕಲ್ಲು ವ್ಯಾಪ್ತಿಯಲ್ಲಿ ಪ್ರವಾಸಿ ವಸತಿಗಳನ್ನು ನಿರ್ಮಿಸಿರುತ್ತಾರೆಂದು ಸರ್ಕಾರದ ಉತ್ತರದಲ್ಲಿ ಹೇಳಿದ್ದಾರೆ ನನ್ನ ಗಮನಕ್ಕೆ ಬಂದ ಹಾಗೆ, ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು, ವಸತಿಗಳನ್ನು ಕಟ್ಟಿರುವುದು ನನಗೆ ನೆನಪಿಲ್ಲ ಇಬ್ಬರು ಖಾಸಗಿ ಬಂಡವಾಳಗಾರರೆಂದು ಏನು ಹೇಳಿದ್ದಾರೆ, ಅವರ್ಯಾರು ಎಂದು ಹೇಳಬೇಕು ಮತ್ತು ಅವರು ಎಲ್ಲಿ ವಸತಿಗಳನ್ನು ಕಟ್ಟಿದ್ದಾರೆನ್ನುವುದನ್ನು ತಿಳಿಸಬೇಕು ಹಾಗೆಯೇ, ಪಶ್ಚಿಮಘಟ್ಟದ ಪರ್ವತ ಶ್ರೇಣಿಯಲ್ಲಿಯೂ ಕೂಡ ಇಲಾಖೆಯಿಂದ ಲಭ್ಯವಿರುವ ಅನುದಾನದಲ್ಲಿ ಉಪಯೋಗಿಸಿಕೊಂಡು ಅನೇಕ ಸ್ಥಳಗಳನ್ನು ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿರುತ್ತಾರೆಂದು ಹೇಳಿದ್ದಾರೆ ನಮ್ಮ ತಾಲ್ಲೂಕಿನಲ್ಲಿ ಅದು ಎಲ್ಲಿ ಆಗಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಬಿ ಶ್ರೀರಾಮುಲು ಮಾನ್ಯ ಅಧ್ಯಕ್ಷರೆ, ಬೆಳ್ತಂಗಡಿ, ಧರ್ಮಸ್ಥಳ, ವೇಣೂರುಗಳನ್ನು ಪ್ರವಾಸಿ ತಾಣಗಳಾಗಿ ಗುರುತಿಸಲಾಗಿದೆ ಗಡಾಯಿಕಲ್ಲು ಪ್ರದೇಶದಲ್ಲಿ ಇಬ್ಬರು ಖಾಸಗಿ ಬಂಡವಾಳಗಾರರು ವಸತಿ ನಿರ್ಮಿಸಿದ್ದಾರೆ ಕರಾವಳಿ ಪ್ರದೇಶದಲ್ಲಿ ಕೇಂದ್ರ ಸರ್ಕಾರದಿಂದ 2 ಕೋಟಿ 9 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಇದರಲ್ಲಿ 30 ಲಕ್ಷ ರೂಪಾಯಿಗಳನ್ನು ಸೈನೇಜುಗಳಿಗೆ ಅಳವಡಿಸಲಾಗಿದೆ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಬೇಕೆಂದು ಗೋಕರ್ಣ, ಮಲ್ಪೆ,St, Maries Island, ತಣ್ಣೀರುಬಾವಿ, ತ್ರಾಸಿ ಕಡಲುತೀರ, ಕಾಸರಗೋಡು, ಉಲ್ಲಾಳ sea-shore ಎಲ್ಲವನ್ನು ಅಬಿವೃದ್ಧಿಪಡಿಸಲಿಕ್ಕೆ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕೊಟ್ಟಿದ್ದೇವೆ ಇನ್ನೂ ಕೂಡ ಹಣ ಬಿಡುಗಡೆಯಾಗಿಲ್ಲ ರಾಜ್ಯ ಸರ್ಕಾರದಿಂದ ಏನು 148 ಕೋಟಿ ರೂಪಾಯಿಗಳು ಬಿಡುಗಡೆಯಾಗಬೇಕಾಗಿತ್ತು, ಆ ಹಣಕ್ಕೆ ನಾನು ಎಲ್ಲ ರೀತಿಯಲ್ಲೂ ಕೂಡ ಒಂದು ಕ್ರಿಯಾ ಯೋಜನೆ ಮಾಡಿಕೊಂಡು Finance Department ಗೆ ಕಳುಹಿಸಿಕೊಟ್ಟಿದ್ದೇವೆ ರಾಜ್ಯ ಸರ್ಕಾರದ ಹಣ ಕೂಡ ಬೇಕಾದರೆ ನಾವು ಅಲ್ಲಿ ಕೊಡುವುದಕ್ಕೆ ರೆಡಿಯಾಗಿದ್ದೇವೆ ಅದರ ಜೊತೆಯಲ್ಲಿ ಕೇಂದ್ರ ಸರ್ಕಾರದಿಂದ ಬಂದಂಥ ಹಣದ ಜೊತೆಗೆ ಇನ್ನೂ 8 ಕೋಟಿ ರೂಪಾಯಿ ಬರಬೇಕಾಗಿದೆ ಬಂದನಂತರ ಆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಿಕ್ಕೆ ಒಂದು ಪ್ರಯತ್ನವನ್ನು ಮಾಡುತ್ತೇವೆ

ಶ್ರೀ ಕೆ ಪ್ರಭಾಕರ ಬಂಗೇರ ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರ ಬಂದಿಲ್ಲ ಆ ಬಂಡವಾಳಗಾರರು ಆಯರು? ಅವರು ಯಾರೆಂದು ಉತ್ತರದಲ್ಲಿ ಹೇಳಲಿಲ್ಲ ಇಬ್ಬರು ಎಂದು ಮಾತ್ರಹೇಳಿದ್ದಾರೆ ಎಲ್ಲಿ ವಸತಿಯನ್ನು ನಿರ್ಮಾಣ ಮಾಡಿದ್ದಾರೆ? ಯಾವ ಪ್ರದೇಶದಲ್ಲಿ ಎಲ್ಲಿ ಎಂಬುದನ್ನು ಉತ್ತರದಲ್ಲಿ ಹೇಳಬೇಕು ಪಶ್ಚಿಮಘಟ್ಟದಲ್ಲಿಯೂ ಕೂಡ ಪರ್ವತಶ್ರೇಣಿಯಲ್ಲಿ ಇಲಾಖೆಗೆ ಲಭ್ಯವಿರುವ ಅನುದಾನದಲ್ಲಿ ಮಾಡಿದ್ದಾರೆಂದು ಹೇಳಿದ್ದಾರೆ ಎಲ್ಲಿ ಯಾವ್ಯಾಯವ ಸ್ಥಳಧಲ್ಲಿ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ ಎನ್ನುವುದನ್ನು ಹೇಳಬೇಕು ನಂತರ, ಶಿಶಿಲ ಎನ್ನುವಲ್ಲಿ ಒಂದು ದೇವಸ್ಥಾನವಿದೆ ಅದು ಕೂಡ ಪ್ರಕೃತಿ ರಮಣೀಯವಾದ ಕ್ಷೇತ್ರವಾಗಿದೆ ಅಲ್ಲಿಯೂ ಕೂಡ ಪ್ರವಾಸಿಗಳ ಸಲುವಾಗಿ ಅಭಿವೃದ್ಧಿಪಡಿಸುವ ಪ್ರಯತ್ನಗಳು ಆಗುತ್ತವೆಯೇ? ಅದರ ಜೊತೆಗೆ, ಸೌತಡ್ಕ ಎಂಬಲ್ಲಿ ಮಹಾಗಣಪತಿ ದೇಪಸ್ಥಾನವಿದೆ ಅಲ್ಲಿಯೂ ಕೂಡ ಪ್ರವಾಸಿ ತಾಣವನ್ನು ಮಾಡಬಹುದು ಅಲ್ಲಿಯೂ ಕೂಡ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬುದರ ಬಗ್ಗೆ ತಿಳಿಸಬೇಕಾಗಿ ತಮ್ಮ ಮೂಲಕ ಕೋರುತ್ತೇನೆ

ಶ್ರೀ ಬಿ ಶ್ರೀರಾಮಲು ಮಾನ್ಯ ಅಧ್ಯಕ್ಷರೆ, ಈ ಭಾಗದಲ್ಲಿ ಬಹಳಷ್ಟು ದೇವಸ್ಥಾನಗಳಿವೆ, ದೇವಸ್ಥಾಗಳನ್ನು ಅಭಿವೃದ್ಧಿ ಮಾಡುವುದರಲ್ಲಿ ಪ್ರವಾಸೋದ್ಯಮ ಇಲಾಖೆಯವರು ಮುಂದೆ ಬರಬೇಕೆಂದು ಮಾನ್ಯ ಶಾಸಕರು ಸೂಚನೆಯನ್ನು ಕೊಟ್ಟಿದ್ದಾರೆ ಖಂಡಿತಾಗಿ ಎಲ್ಲಾ ರೀತಿಗಳಿಂದ ಪ್ರವಾಸೋದ್ಯಮ ಇಲಾಖೆಯಲ್ಲಿ ಬೇಕಾದಂಧ ಎಲ್ಲಾ ಸೌಲಭ್ಯಗಳು, ಯಾತ್ರೆಗೆ ಬಂದಂಧ ಸಂದರ್ಭದಲ್ಲಿ ಅವರಿಗೆ ಬೇಕಾದಂಧ ಎಲ್ಲಾ ಸೌಲಭ್ಯಗಳ ಬಗ್ಗೆ ಶಾಸಕರ ಜೊತೆ ಚರ್ಚಿಸಿ ಮಾಡಿಕೊಡುತ್ತೇವೆನ್ನುವ ಮಾತನ್ನು ತಮ್ಮ ಮೂಲಕ ಹೇಳಬಯಸುತ್ತೇನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 29 (94)

(ಶ್ರೀ ಬಿ ಕೆ ಸಂಗಮೇಶ್ವರರವರು ಪ್ರಶ್ನೋತ್ತರ ವೇಲೆಯಲ್ಲಿ ಗೈರುಹಾಜರಾಗಿದ್ದರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 30(69)

(ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ ರವರು ಪ್ರಶ್ನೋತ್ತರ ವೇಳೆಯಲ್ಲಿ ಗೈರುಹಾಜರಾಗಿದ್ದರು)